

# ನಂಬಿಕೆ ಎಂಬ ಗುರಾಣಿ ಹಿಡಿದು..

ಒಂದೂವರೆ ವರ್ಷಗಳ ನಂತರ ಅಚಾನಕ್ಕಾಗಿ ಸಿಕ್ಕಿದ ಕಾಲೇಜು ದಿನಗಳ ಸ್ನೇಹಿತ, ಉಭಯ ಕುಶಲೋಪರಿಯ ನಂತರ ತಾನು ಎದುರಿಸುತ್ತಿರುವ ಸಮಸ್ಯೆಯೊಂದರ ಕಡೆಗೆ ಗಮನ ಸೆಳೆದ. 'ನಾಲ್ಕು ತಿಂಗಳ ಹಿಂದೆ ನಮ್ಮಪ್ಪ ತೀರಿಕೊಂಡಾಗಿನಿಂದಲೂ ನನಗೆ ಒಂದಲ್ಲ ಒಂದು ತಾಪತ್ರಯ. ಇದೆಲ್ಲದರಿಂದ ಮೊದಲು ಬಿಡಿಸಿಕೊಂಡು ಹೊರ ಬಂದರೆ ಸಾಕೆನಿಸಿದೆ. ನಿನಗೂ ತಿಳಿದಿರುವಂತೆ ಪ್ರಾಧ್ಯಾಪಕರಾಗಿದ್ದ ನಮ್ಮಪ್ಪ ಗೊಡ್ಡು ಸಂಪ್ರದಾಯ ಮತ್ತು ಆಚರಣೆಗಳಿಂದ ದೂರ ಉಳಿದವರು. ಸಾಯುವ ಮುನ್ನ ಕೂಡ ಯಾವುದೇ ಕಾರಣಕ್ಕೂ ತನ್ನ ತಿಥಿ ಸೇರಿದಂತೆ ಯಾವುದೇ ಕಾರ್ಯಗಳನ್ನು ನೆರವೇರಿಸಬಾರದೆಂದು ಸೂಚಿಸಿದ್ದರು. ನಾನು ಸಹ ಸಂಬಂಧಿಕರ ವಿರೋಧದ ನಡುವೆಯೂ ಅಪ್ಪನ ನಿಲುವು ಗೌರವಿಸಿ, ಅವರ ಬಯಕೆಯಂತೆಯೇ ಯಾವುದೇ ಕಾರ್ಯ ನೆರವೇರಿಸುವ ಗೋಜಿಗೆ ಹೋಗಲಿಲ್ಲ. ಆದರೆ, ಇದೀಗ ಹೊಸ ಸಮಸ್ಯೆಯೊಂದು ಸೃಷ್ಟಿಯಾಗಿದೆ. ನಮ್ಮಪ್ಪ ಗಾಳಿಯಾಗಿ ಹತ್ತಿರದ ಸಂಬಂಧಿಯೊಬ್ಬರ ಮೈ ಹೊಕ್ಕಿದ್ದಾರಂತೆ. ಇದಕ್ಕೆಲ್ಲ ನಾನು ತಿಥಿ ನೆರವೇರಿಸದೆ ಇರುವುದೇ ಕಾರಣವಂತೆ' ಎಂದು ಆತ ತನ್ನ ದುಗುಡ ತೋಡಿಕೊಂಡ.

ಅವರ ಪ್ರಶ್ನೆಯೂ ಗಂಭೀರವಾದದ್ದೇ. 'ತಮ್ಮ ಬದುಕಿನುದ್ದಕ್ಕೂ ವಿದ್ಯಾರ್ಥಿಗಳಿಗೆ ವೈಚಾರಿಕತೆಯ ಪಾಠ ಬೋಧಿಸಿದ ನಮ್ಮಪ್ಪನಿಗೆ ಇದೀಗ ದೆವ್ವದ ಪಟ್ಟ ಕಟ್ಟಿಬಿಟ್ಟಿದ್ದಾರೆ; ತಿಥಿ ಮಾಡಲಿಲ್ಲವೆಂಬ ಒಂದೇ ಕಾರಣಕ್ಕೆ! ಇದಕ್ಕೆಲ್ಲ ಏನು ಹೇಳೋದು' ಅಂತ ಪ್ರಶ್ನಿಸಿದ. ಅವನ ಸಮಸ್ಯೆ ಪರಿಹರಿಸುವ ದಾರಿ ನನಗೂ ಹೊಳೆದಂತೆ ತೋರಲಿಲ್ಲ.

ಮಾತು ಮುಂದುವರೆಸಿದ ಅವನು, 'ಇಪ್ಪತ್ತೈದು ವರ್ಷಗಳ ಹಿಂದೆಯೇ ಅಂತಧರ್ಮೀಯ ವಿವಾಹವಾದ ನಮ್ಮ ಸಂಬಂಧಿಯೊಬ್ಬರಿದ್ದಾರೆ. ಅವರು ಸಿಟಿಯಲ್ಲಿರೋದ್ರಿಂದ ಈಗಲೂ ನೆಮ್ಮದಿಯಿಂದಿದ್ದಾರೆ. ಒಂದು ವೇಳೆ ಮದುವೆ ನಂತರ ಹಳ್ಳಿಯಲ್ಲಿ ಬದುಕು ಕಟ್ಟಿಕೊಂಡಿದ್ದರೆ ಆಗ ಸಮಸ್ಯೆಗಳ ಅಸಲಿ ಮುಖದ ಪರಿಚಯ ಅವರಿಗೂ ಆಗುತ್ತಿತ್ತು. ಸಿಟಿಯಲ್ಲಿದ್ದುಕೊಂಡು ವಿಚಾರವಾದ ಮಂಡಿಸುವುದು, ಮೂಢನಂಬಿಕೆಗಳ ವಿರುದ್ಧ ಸಮರ ಸಾರುತ್ತಿದ್ದೇವೆಂದು ಬೀಗುವುದು ಸುಲಭ. ಆದ್ರೆ ಹಳ್ಳಿಗಳಲ್ಲಿ ಬೇರೂರಿರುವ ಸಂಪ್ರದಾಯ ಆಚರಣೆಗಳ ಬೇರು ತುಂಡರಿಸುವುದು ಅಸಾಧ್ಯ' ಎಂದು ವಾದಿಸಿದ.

ಸ್ನೇಹಿತ ಹೇಳಿದ್ದು ನಿಜವೇ ಎಂದು ಪರಿಶೀಲಿಸಲು ಹೊರಟ ನನ್ನ ಮನಸ್ಸಿನೆದುರು ಮತ್ತೊಂದಿಷ್ಟು ಪ್ರಸಂಗಗಳು ಹಾದು ಹೋದವು. ಸದ್ಯ ನಮ್ಮ ಮನೆಯಲ್ಲಿ ಬಾಡಿಗೆಗೆ ಇರುವವರು ಬಂದ ಆರು ತಿಂಗಳಿಗೇ ಮನೆ ಖಾಲಿ ಮಾಡಲು ನಿರ್ಧರಿಸಿದ್ದಾರೆ. ಈಗಿರುವ ಮನೆಗೆ ಅವರು ಬಂದ ಮೇಲೆ ಮೂರು ಲಕ್ಷ ರೂಪಾಯಿ ಸಾಲ ಮಾಡಿಕೊಂಡರಂತೆ. ಊರಿನಲ್ಲಿರುವ ಅವರ ಕುಟುಂಬ ಸದಸ್ಯರೊಬ್ಬರ ಆರೋಗ್ಯ ಹದಗೆಡಲು ಕೂಡ ನಮ್ಮ ಮನೆಯ ವಾಸ್ತು ಸರಿ